## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಮಾನ್ಯ ಸದಸ್ಯರ ಹೆಸರು | : | ಶ್ರೀ ಛಲವಾದಿ ಟಿ.ನಾರಾಯಣಸ್ವಾಮಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | **898** |
| ಉತ್ತರಿಸಬೇಕಾದ ದಿನಾಂಕ | : | 21.09.2022 |
| ಉತ್ತರಿಸಬೇಕಾದ ಸಚಿವರು | : | ವಸತಿ ಮತ್ತು ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕರ್ನಾಟಕ ರಾಜ್ಯಾದ್ಯಂತ ವಾಸಯೋಗ್ಯ ಪಕ್ಕಾ ಮನೆಗಳ ರಹಿತ ಕುಟುಂಬಗಳ ಸಂಖ್ಯೆ ಎಷ್ಟಿವೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು ;<br>(ಮಾಹಿತಿಯನ್ನು ದಾಖಲೆ ಸಹಿತ ನೀಡುವುದು)</td><td>ಬಂದಿದೆ.<br><br>2018 ರಲ್ಲಿ ಗ್ರಾಮೀಣ ಪ್ರದೇಶದಲ್ಲಿ ರಾಜ್ಯದಾದ್ಯಂತ ನಡೆಸಿದ ವಸತಿ/ನಿವೇಶನರಹಿತರ ಸಮೀಕ್ಷೆಯನ್ವಯ ಒಟ್ಟು 18,71,691 ವಸತಿರಹಿತರು ಹಾಗೂ 7,19,190 ನಿವೇಶನರಹಿತರು ಕಂಡು ಬಂದಿರುತ್ತಾರೆ. ನಗರ ಪ್ರದೇಶದಲ್ಲಿ ನಡೆಸಿದ ಬೇಡಿಕೆ ಸಮೀಕ್ಷೆಯನ್ವಯ ಒಟ್ಟು 3,02,187 ವಸತಿರಹಿತರು ಹಾಗೂ 10,27,657 ನಿವೇಶನರಹಿತರು ಕಂಡು ಬಂದಿರುತ್ತಾರೆ ವಿವರ ಕೆಳಕಂಡಂತಿದೆ.<br><br>
<table>
<tr><th>ಪ್ರದೇಶ</th><th>ವಸತಿ ರಹಿತರು</th><th>ನಿವೇಶನ ರಹಿತರು</th><th>ಒಟ್ಟು</th></tr>
<tr><td>ಗ್ರಾಮೀಣ</td><td>1871691</td><td>719190</td><td>2590881</td></tr>
<tr><td>ನಗರ</td><td>302187</td><td>1027657</td><td>1329844</td></tr>
</table>
<br>ಸರ್ಕಾರವು ರಾಜ್ಯದಲ್ಲಿ ಬಡ ವಸತಿ ರಹಿತ ಕುಟುಂಬಗಳಿಗೆ ವಸತಿ ಸೌಲಭ್ಯವನ್ನು ಒದಗಿಸಲು ವಿವಿಧ ವಸತಿ ಯೋಜನೆಗಳನ್ನು ಜಾರಿಗೆ ತಂದು ಅನುಷ್ಠಾನಗೊಳಿಸುತ್ತಿದ್ದು, ವಿವರ ಕೆಳಕಂಡಂತಿದೆ.<br><br><u>ಗ್ರಾಮೀಣ ಪ್ರದೇಶದಲ್ಲಿರುವ ಯೋಜನೆಗಳು:</u><br>1. ಬಸವ ವಸತಿ ಯೋಜನೆ<br>2. ಡಾ. ಬಿ.ಆರ್. ಅಂಬೇಡ್ಕರ್ ನಿವಾಸ್ (ಗ್ರಾಮೀಣ) ವಸತಿ ಯೋಜನೆ<br>3. ಪ್ರಧಾನ ಮಂತ್ರಿ ಆವಾಸ್ (ಗ್ರಾಮೀಣ) ಯೋಜನೆ<br>4. ಡಿ.ದೇವರಾಜು ಅರಸು (ಗ್ರಾಮೀಣ) ಯೋಜನೆ<br><br><u>ನಗರದಲ್ಲಿ ಪ್ರದೇಶದಲ್ಲಿರುವ ವಸತಿ ಯೋಜನೆಗಳು:</u><br>1. ವಾಜಪೇಯಿ ನಗರ ವಸತಿ ಯೋಜನೆ<br>2. ಡಾ. ಬಿ.ಆರ್. ಅಂಬೇಡ್ಕರ್ ನಿವಾಸ್ (ನಗರ) ಯೋಜನೆ<br>3. ಡಿ.ದೇವರಾಜು ಅರಸು (ನಗರ) ಯೋಜನೆ<br>4. ಪ್ರಧಾನ ಮಂತ್ರಿ ಆವಾಸ್ (ನಗರ) ಯೋಜನೆ<br>5. ಮುಖ್ಯ ಮಂತ್ರಿಯವರ ಒಂದು ಲಕ್ಷ ಬಹುಮಹಡಿ ಯೋಜನೆ<br><br><u>ನಿವೇಶನ ಯೋಜನೆಗಳು:</u><br>1. ಮುಖ್ಯಮಂತ್ರಿಗಳ ಗ್ರಾಮೀಣ ನಿವೇಶನ ಯೋಜನೆ<br>2. ಮುಖ್ಯಮಂತ್ರಿಗಳ ನಗರ ನಿವೇಶನ ಯೋಜನೆ</td></tr>
<tr><td>ಆ)</td><td>ಗ್ರಾಮಗಳು, ಪುರಸಭೆಗಳು, ನಗರ ಸಭೆಗಳು ಮತ್ತು ಮಹಾನಗರ ಪಾಲಿಕೆಗಳ</td><td>ರಾಜ್ಯದ ಎಲ್ಲಾ ನಗರ ಮತ್ತು ಗ್ರಾಮೀಣ ಪ್ರದೇಶಗಳನ್ನು ಸಮೀಕ್ಷೆ ಕೈಗೊಂಡು ಈಗಾಗಲೇ ವಸತಿ ರಹಿತ/ ನಿವೇಶನ ರಹಿತ ಕುಟುಂಬಗಳನ್ನು ಗುರುತಿಸಲಾಗಿದೆ.</td></tr>
</table>

| | | |
|---|---|---|
| | ವ್ಯಾಪ್ತಿಯಲ್ಲೂ ಸಹ ಈಗಲೂ ವಾಸಯೋಗ್ಯ ಪಕ್ಕಾ ಮನೆಗಳಿಲ್ಲದೇ ಜೀವನವನ್ನು ಸಾಗಿಸುತ್ತಿರುವವರ ಬಗ್ಗೆ ಸರ್ಕಾರ ವರದಿ ಅಥವಾ ತನಿಖೆ ಮಾಡಲು ಒಂದು ಸಮಿತಿಯನ್ನು ರಚಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ? | ರಾಜ್ಯ ಸರ್ಕಾರವು ಆಯಾ ವರ್ಷಗಳಲ್ಲಿ ಆಯವ್ಯಯದಲ್ಲಿ ನಿಗದಿಪಡಿಸುವ ಅನುದಾನವನ್ನು ಆಧರಿಸಿ, ನಗರ / ಗ್ರಾಮೀಣ ಪ್ರದೇಶಗಳಿಗೆ ವರ್ಗವಾರು ಭೌತಿಕ ಗುರಿಯನ್ನು ನಿಗದಿಪಡಿಸುತ್ತದೆ. ಅದರಂತೆ ಸಮೀಕ್ಷೆಯಲ್ಲಿ ಗುರುತಿಸಿರುವ ವಸತಿರಹಿತ ಕುಟುಂಬಗಳನ್ನು ಆದ್ಯತೆ ಮೇರೆಗೆ ಆಯ್ಕೆಮಾಡಿ ಮನೆ ನಿರ್ಮಿಸಿಕೊಳ್ಳಲು ಸಹಾಯಧನವನ್ನು ಒದಗಿಸಲಾಗುತ್ತಿದೆ.<br><br>ನಗರ ಪ್ರದೇಶಗಳಲ್ಲಿ ಬಡ ನಿವೇಶನ ರಹಿತ ಕುಟುಂಬಗಳಿಗೆ ಸರ್ಕಾರದ ಜಮೀನನ್ನು ಗುರುತಿಸಿ /ಖಾಸಗಿ ಜಮೀನನ್ನು ಖರೀದಿಸಿ ಬಹುಮಹಡಿ ಮಾದರಿಯಲ್ಲಿ ಮನೆಗಳನ್ನು ನಿರ್ಮಿಸಿ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಗ್ರಾಮೀಣ ಪ್ರದೇಶಗಳಲ್ಲಿ ಬಡ ನಿವೇಶನ ರಹಿತ ಕುಟುಂಬಗಳಿಗೆ ಸರ್ಕಾರದ ಜಮೀನನ್ನು ಗುರುತಿಸಿ /ಖಾಸಗಿ ಜಮೀನನ್ನು ಖರೀದಿಸಿ ನಿವೇಶನಗಳನ್ನು ರಚಿಸಿ ಹಂಚಿಕೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.<br><br>ಸರ್ಕಾರವು ಮೇಲ್ಕಂಡ ವಿವಿಧ ಯೋಜನೆಗಳಡಿ ಬಡ ಕುಟುಂಬಗಳಿಗೆ ವಸತಿ ಸೌಳಭ್ಯವನ್ನು ಒದಗಿಸಲು ಕ್ರಮ ಕೈಗೊಳ್ಳುತ್ತಿದೆ. |

ಸಂಖ್ಯೆ :ವಇ 410 ಹೆಚ್‌ಎಂ 2022

(ವಿ. ಸೋಮಣ್ಣ)
ವಸತಿ ಮತ್ತು ಮೂಲಸೌಲಭ್ಯ
ಅಭಿವೃದ್ಧಿ ಸಚಿವರು